ಮತ್ತೆ ಮಳೆ ಹೊಯ್ಯುತಿದೆ... ಎಲ್ಲ ನೆನಪಾಗುತಿದೆ... ಯು.ಆರ್. ಅನಂತಮೂರ್ತಿಯವರ ಈ ಸಾಲುಗಳು ಬರೀ ಮಳೆಯ ನೆನಪಲ್ಲ, ಬದುಕಿನ ಎಲ್ಲ ನೆನಪುಗಳನ್ನು ಮಳೆಯ ರೂಪದಲ್ಲಿ ರೂಪಕವಾಗಿಸಿ, ಎಲ್ಲರನ್ನೂ ಕಾಡುವ ಸಾಲುಗಳು. ಅನಂತಮೂರ್ತಿಯವರಿಗೆ ಒಂದು ರೀತಿಯ ಮಳೆ ನೆನಪಾದರೆ, ನಮ್ಮಂತಹವರಿಗೆ ಇನ್ನೊಂದು ರೀತಿಯ ನೆನಪುಗಳು ಕಾಡುತ್ತವೆ. ಮಳೆಗಾಲದಲ್ಲಿ ಸುರಿವ ಮಳೆಯಿಂದ ಗುಡಿಸಲು ಸೋರಿದ ನೆನಪುಗಳ ಮರೆಯಲುಂಟೆ? ಮಳೆ ಎಂದರೆ ಧರೆಗೆ ಅಮೃತ ಸಿಂಚನದ ಸಂಭ್ರಮದ ಹಬ್ಬ. ಭೂಮಿಗೂ ಸೇರಿದಂತೆ ಸಕಲೆಂಟು ಜೀವರಾಶಿಗೆ ಮಳೆಯ ಪ್ರತಿ ಹನಿಯೂ ಜೀವದ್ರವ್ಯ. ನೀರಿಲ್ಲದ ಈ ಲೋಕವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾವು ನೆಲದೊಳಗಿನ ನೀರನ್ನು ಹುಡುಕಿ ತೆಗೆಯಬಹುದು. ಆದರೆ, ಆಕಾಶದ ಮೋಡಗಳ ನೀರಿಗಾಗಿ ಕಾಯಲೇಬೇಕು. ಋತುಚಕ್ರದಲ್ಲಿ ಅದು ಬಂದಾಗ ಆನಂದದಿಂದ ಸ್ವೀಕರಿಸಬೇಕು. ಮಳೆ ಬರಲೆಂದು ಎಷ್ಟೆಲ್ಲ ಪ್ರಾರ್ಥಿಸುವ ನಾವು, ಅದು ಬಂದಾಗ ಶಪಿಸುವ ಕೆಲವರ ಮನಸ್ಥಿತಿಗೆ ಏನೆನ್ನಬೇಕು ತಿಳಿಯದು. ಮನುಷ್ಯನ ಬೇಕುಗಳು ಅಪರಿಮಿತ. ಎಷ್ಟೇ ಪೂರೈಸಿದರೂ ಮುಗಿಯದ ಬೇಡಿಕೆಗಳಿಂದ ಇಡೀ ಪ್ರಕೃತಿ ತಲ್ಲಣಗೊಂಡಿದೆ. ಇದರಿಂದ ಅತಿವೃಷ್ಟಿ-ಅನಾವೃಷ್ಟಿ ನಿರ್ಮಾಣವಾಗಿದೆ ಕೂಡ. ಆದರೂ ಪ್ರಕೃತಿ ಎಲ್ಲವನ್ನೂ ಕ್ಷಮಿಸುವಂತೆ, ಕ್ಷಮಯಾಧರಿತ್ರಿಯಾಗಿ ತಾಯಿಯಂತೆ ಪೊರೆಯುತ್ತದೆ.

ನನಗೆ ಈ ಮಳೆ ಬಾಲ್ಯದಿಂದಲೂ ಒಂದು ವಿಸ್ಮಯ. ಎಷ್ಟೋ ಶತಮಾನಗಳಿಂದಲೂ ಮುಗಿಯದೇ ಸುರಿಯುತ್ತಲೇ ಇರುವ ಆಕಾಶದಲ್ಲಿ ಎಂಥ ದೊಡ್ಡ ಜಲಸಾಗರವಿರಬಹುದು! ಅಥವಾ, ಈ ಲೋಕದ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ, ಅನಾಚಾರದ ಪಾಪಗಳನ್ನು ತೊಳೆಯುವುದಕ್ಕೆಂದು ಶಿವನ ತಲೆಯ ಮೇಲೆ ಕುಳಿತ ಗಂಗೆ ಮಳೆಯ ರೂಪ ತಳೆದಳೋ? ಶತಶತಮಾನಗಳಿಂದಲೂ ನೊಂದ ನನ್ನವರ ಕಣ್ಣೀರ ಧಾರೆಯೊ? ಇದಾವುದೂ ಅಲ್ಲದ ಪ್ರಕೃತಿಸಹಜ ಕ್ರಿಯೆಯೋ?

ಮಳೆ ಸಕಲರಿಗೂ ಜೀವಚೈತನ್ಯ ನೀಡುತ್ತದೆ. ನೀರಿನ ಪ್ರತಿ ಹನಿಯ ಬೆಲೆ ಮನುಷ್ಯನಿಗೆ ಈಗಲೂ ಅರ್ಥವಾಗಿಲ್ಲ ಎನ್ನುವುದು ಮನುಷ್ಯನ ದುರಂತವೇ ಸರಿ. ಜಗತ್ತು ಎಷ್ಟೋ ಮುಂದುವರೆದಿದೆ ಎನ್ನುತ್ತಲೇ ಮನುಷ್ಯ ಮಾತ್ರ ತನ್ನ ದಟ್ಟ ದರಿದ್ರ ಆಲೋಚನೆಯಿಂದ ಒಳಿತಿಗಾಗಿ ಹಂಬಲಿಸದೇ, ತನ್ನ ಕುಕೃತ್ಯಗಳಿಂದ ಪ್ರತಿಕ್ಷಣವೂ ನರಳುತ್ತಿದ್ದಾನೆ ಅನ್ನಿಸುತ್ತದೆ. ಬಹುಶಃ ಈ ಮಳೆಗಾಲದಲ್ಲಿ ಗಾಳಿ-ಮಳೆ ಎಷ್ಟು ಜೋರಾಗಿ ಬೀಸಿ ಸುರಿದು, ಎಲ್ಲವನ್ನೂ ತೊಳೆದುಕೊಂಡು ಹೋದರೂ, ಮತ್ತೆ ಮಾರನೆಯ ದಿನ ಮನುಷ್ಯ ಮಾಡಿದ ಕಸದ ರಾಶಿ ಮಾತ್ರ ಹಾಗೇ ಇರುತ್ತದೆ. ಜಗತ್ತಿನಲ್ಲಿ ತೊಳೆಯಲಾರದ ಜೀವ ಇದ್ದರೆ ಅದು ಮನುಷ್ಯ ಮಾತ್ರ. ಎಷ್ಟೇ ಮಳೆ ಸುರಿದರೂ ಇವನ ಕೊಳೆ ಮಾತ್ರ ತೊಳೆದಷ್ಟೂ ಮುಗಿಯದು! ಆದರೂ ನಮಗೆಲ್ಲ ಮತ್ತೆ ಮತ್ತೆ ಮಳೆ ಬೇಕೇ ಬೇಕು. 'ಮಳೆ ಬರಲಿ, ಲೋಕದ ಎಲ್ಲರ ಮನೆಯ ಮೇಲೆ' ಎನ್ನುತ್ತ ನಾನು ಮಳೆಯಾಗಬೇಕು ಎನ್ನುವ ಕನಸ ಕಾಣಬೇಕು. ಆಗ ನಮ್ಮೊಳಗಿನ ಒಂದಿಷ್ಟು ಪಾಪಗಳನ್ನಾದರೂ ತೊಳೆದುಕೊಳ್ಳಬಹುದು.

ಪ್ರತಿಯೊಬ್ಬರಿಗೂ ಮಳೆಗಾಲದ ನೆನಪು ಇದ್ದೇ ಇರುತ್ತದೆ. ಹಾಗೆ, ನನ್ನ ಎಳವೆಯಲ್ಲಿ ಮಳೆಯಲ್ಲಿ ಆಡಿದ್ದು, ನಡೆದಿದ್ದು, ಓಡಿದ್ದು, ಬದುಕಿದ್ದು, ಈಗ ಮತ್ತೆ ಮಳೆಗಾಲದಲ್ಲಿ ನೆನೆಯುತ್ತ...

ಮಳೆಗಾಲ ಎಂದರೆ ಬಡವರಿಗೆ ಚಾರ್ಲಿ ಚಾಪ್ಲಿನ್ ಮಳೆಯಲ್ಲಿ ನಿಂತು ಅಳುವ ಹಾಗೆ. ನಮ್ಮ ಮನೆ ಊರ ಒಳಗಿತ್ತು. ನಮ್ಮ ಅಣ್ಣ ಯಾವಾಗಲೂ ಕಿರುಕುಳ ಕೊಡುತ್ತಾನೆ, ಸಣ್ಣಪುಟ್ಟದಕ್ಕೆಲ್ಲ ಜಗಳ ಮಾಡುತ್ತಾನೆ, ಕೋಳಿ ನಾಯಿ ಓಡಾಡಿದರೂ ಸಹಿಸಿಕೊಳ್ಳುವುದಿಲ್ಲ... ಎಂದೆಲ್ಲ ದುಮ್ಮಾನದಿಂದ ಅಪ್ಪ ಊರಿನ ಅಂಗಡಿ ಹತ್ತಿರವಿರುವ ಮತ್ತು ಸರ್ಕಾರಿ ಆಸ್ಪತ್ರೆ ಪಕ್ಕದಲ್ಲಿರುವ ಜಾಗದಲ್ಲಿ, ನಮ್ಮ ಕೇರಿಯವರೇ ಗುಡಿಸಲು ಹಾಕಿಸಿಕೊಂಡಿರುವ ಒಂದು ಸ್ಥಳದಲ್ಲಿ ತಾನೂ ಒಂದು ಗುಡಿಸಲು ಹಾಕಿಕೊಂಡಿತ್ತು. ನನಗೆ ತಿಳಿದಿರುವಂತೆ ನನ್ನ ಬಾಲ್ಯವೆಲ್ಲ ಆಡಿ ಬೆಳೆದದ್ದು ಅಲ್ಲೇ...

ಸಾಮಾನ್ಯವಾಗಿ ಮಲೆನಾಡಿನಲ್ಲಿ ಮಳೆಗೂ ಮುಂಚೆ ತುಂಬಾ ಸಿದ್ಧತೆ ಮಾಡಿಕೊಳ್ಳಬೇಕು. ಅದು ಬಡವರಿರಲಿ, ಶ್ರೀಮಂತರಿರಲಿ, ನಾಲ್ಕೈದು ತಿಂಗಳಿಗೆ ಆಗುವಷ್ಟು ಸೌದೆ ಮಾಡಿಕೊಂಡಿರಲೇಬೇಕು. ಆದರೆ, ನಮ್ಮ ಅಪ್ಪ ಅಂತಹ ಸಿದ್ಧತೆಯನ್ನು ಮಾಡಿಕೊಂಡಿದ್ದು ನನಗೆ ಅಷ್ಟಾಗಿ ನೆನಪಿಲ್ಲ. ಬಹಳ ಮುಖ್ಯವಾಗಿ